

## ಸುಮನ್ ಕಿತ್ತೂರು

ಸುಮನ್ ಕಿತ್ತೂರು ಪತ್ರಕರ್ತೆಯಾಗಿ ಕನ್ನಡ ಚಿತ್ರರಂಗದೊಂದಿಗೆ ಒಡನಾಡಿದವರು ಹಾಗೂ ನಂತರದ ದಿನಗಳಲ್ಲಿ ನಿರ್ದೇಶಕಿಯಾಗಿ ಗುರ್ತಿಸಿಕೊಂಡವರು. 'ಕಳ್ಳರಸಂತೆ', 'ಸ್ಲಂಬಾಲ', 'ಎದೆಗಾರಿಕೆ' ಹಾಗೂ 'ಕಿರಗೂರಿನ ಗಯ್ಯಾಳಿಗಳು' ಅವರ ನಿರ್ದೇಶನದ ಸಿನಿಮಾಗಳು. ಅವರ ನಿರ್ದೇಶನದ 'ಎದೆಗಾರಿಕೆ' ಭೂಗತಲೋಕದ ಕಥನವನ್ನು ಅತ್ಯಂತ ಸಂಯಮದಿಂದ ಹಾಗೂ ಮಾನವೀಯ ಕಥನವಾಗಿ ನಿರೂಪಿಸಿದ ಕಾರಣದಿಂದಾಗಿ ಸಹೃದಯರ ಗಮನಸೆಳೆದಿತ್ತು. ತೇಜಸ್ವಿ ಅವರ ಕಥನ ಆಧರಿಸಿದ 'ಕಿರಗೂರಿನ ಗಯ್ಯಾಳಿಗಳು' ನಿರ್ದೇಶಕಿಯಾಗಿ ಸುಮನ್ ಕಂಡುಕೊಂಡ ಹೊಸದಾರಿ.

ಜಿಗುಟುತನ ತೋರುವ ನಾಗಮ್ಮನೂ ಇದ್ದಾಳೆ. ಭಿನ್ನ ಮನೋಧರ್ಮದ ಹೆಣ್ಣುಗಳ ಕೂಟವಿದು. ದಾನಮ್ಮ ಇದರ ಅಧ್ಯಕ್ಷೆ. ಆಕೆ ಮಾತಿನ ಜೊತೆಗೆ ದೊಣ್ಣೆಯಲ್ಲೂ ಪೆಟ್ಟುಕೊಡಬಲ್ಲಳು.

ಗಂಡಸರ ಮಾತಿನ ನಡುವೆ ಲೈಂಗಿಕತೆಗೆ ಸಂಬಂಧಿಸಿದ ಮಾತುಗಳು ಸಹಜ ಎನ್ನುವಂತೆ ಬಂದುಹೋಗುತ್ತವೆ ಹಾಗೂ ಅಂಥ ಸನ್ನಿವೇಶಗಳು ಸಿನಿಮಾದಲ್ಲಿ ಕೂಡ ರೂಪುಗೊಳ್ಳುತ್ತವೆ. ಆದರೆ, ಹೆಣ್ಣುಮಕ್ಕಳ ಸುತ್ತ ನೈತಿಕತೆಯ ಹೆಸರಿನಲ್ಲಿ ಅನಗತ್ಯ ಬೇಲಿಯೊಂದನ್ನು ನಾವು ಪ್ರಜ್ಞಾಪೂರ್ವಕ ಉಳಿಸಿದ್ದೇವೆ. ಅವರ ಅಂತರಂಗದ ಮಾತುಕತೆಯಲ್ಲಿ ಪೋಲಿತನ ಇಣುಕಬಹುದಾದರೂ, ಬಹಿರಂಗವಾಗಿ ಅವರು ಹುಸಿಗಾಂಭೀರ್ಯದ ಮುಖವಾಡ ತೊಡಬೇಕಿದೆ. ಇಂಥ ಮುಖವಾಡವನ್ನು ಗಯ್ಯಾಳಿಗಳ ತಂಡ ತೊಡೆದುಹಾಕಿದೆ. ತಮ್ಮ ದಾಂಪತ್ಯದ ಕಥೆಗಳನ್ನು ಕಿರಗೂರಿನ ಹೆಣ್ಣುಗಳು ಮಾತನಾಡಿಕೊಳ್ಳುತ್ತಾರೆ. ದಾನಮ್ಮನಂತೂ 'ದೊಡ್ಡದು ಅಂದ್ರೆ ಚೆಂಡೂವು ಆಯ್ತದೆ, ಚಿಕ್ಕದು ಅಂದ್ರೆ ಸಂಪುಗೆ ಹುವ್ವ ಆಯ್ತದೆ' ಎಂದು ಗೆಳತಿಯರನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಗಂಡ ಬೆನ್ನುಮಾಡಿ ಮಲಗಿದಾಗ, ಬೇರೆ ಗಂಡಸರನ್ನು ಕರೆಯುವುದಾಗಿ ಬೆದರಿಸುತ್ತಾಳೆ. ಸಿನಿಮಾದ ಆರಂಭದಲ್ಲಿ ಬೀಸುವ ಗಾಳಿಗೆ ಬಟ್ಟೆಗಳು ಅಸ್ತವ್ಯಸ್ತವಾದಾಗ, ಇಬ್ಬರು ಗಯ್ಯಾಳಿಗಳು ಗೇಲಿ ಮಾಡಿಕೊಂಡು, ಆ ಗೇಲಿಯೇ ಜಗಳವಾಗಿ ಬದಲಾಗುವ ಸನ್ನಿವೇಶವೂ ಮನರಂಜನೆಯ ಐಟಂನಂತೆಯೇ ಇದೆ. ಕೊಂಚ ಒರಟಾಗಿ ಹಾಗೂ ಬಿಡುಬೀಸಾಗಿ ಕಾಣಿಸುವ ಈ ದೃಶ್ಯಗಳು ನಮ್ಮ ರೂಢಿಗತ ನೋಡುವಿಕೆಯನ್ನು ಧಿಕ್ಕರಿಸುವಂತಿವೆ ಹಾಗೂ ಹೆಣ್ಣುಮಕ್ಕಳನ್ನು ಸಹಜವಾಗಿ ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತವೆ. ಹುವ್ವುಗಳ ರೂಪಕದ ಮಾತನಾಡುವ ದಾನಮ್ಮನ ಜೊತೆಗೆ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ'ಯ ನಾಯಕಿಯನ್ನು ನೆನಪಿಸಿಕೊಳ್ಳಬೇಕು. ಮಳೆ ಸುರಿಯುವಾಗಲೂ ಗಿಡಗಳಿಗೆ ನೀರುಣಿಸುವ ನಾಯಕಿಯ ವರ್ತನೆಯ ಬಗ್ಗೆ ನಾಯಕ ಆಶ್ಚರ್ಯ ವ್ಯಕ್ತಪಡಿಸಿದಾಗ – 'ಮಕ್ಕಳಾದ ಮೇಲೆ ಸಂಸಾರ ಮಾಡಲ್ವ?' ಎಂದು ನಾಯಕಿ ಕೆಣಕುತ್ತಾಳೆ. ದಾನಮ್ಮ ಹಾಗೂ ಸಿಂಪಲ್ಲಾಗ್ ಲವ್‌ಸ್ಟೋರಿಯ ನಾಯಕಿ – ಎರಡೂ ಪಾತ್ರಗಳನ್ನು ಒಬ್ಬಳೇ ಕಲಾವಿದೆ ನಿರ್ವಹಿಸಿದ್ದರೂ, ಎರಡೂ ಸಂಭಾಷಣೆಗಳಲ್ಲಿ ಪೋಲಿತನ ಇದ್ದರೂ, ಕಿರಗೂರಿನ ದೃಶ್ಯ ಸಹಜವಾಗಿಯೂ ಮತ್ತೊಂದು ದೃಶ್ಯ ಉದ್ದೇಶಪೂರ್ವಕವಾಗಿಯೂ ಕಾಣಿಸುತ್ತದೆ. ಬಹುಶಃ, ದಾನಮ್ಮನ ಮಾತಿನ ಹಿಂದೆ ಹೆಣ್ಣುಮಗಳೊಬ್ಬಳ ಮನಸು ಕೆಲಸು ಮಾಡಿರುವುದು ಈ